*G and WC 23/2024*
*P.W-1*

(ಸಾಕ್ಷಿಗೆ ದಿನಾಂಕ: 17.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಕೆ.ಜಿ.ಪಿ., ಅರ್ಜಿದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನನ್ನ ಅರ್ಜಿಗೆ ಪೂರಕವಾಗಿ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು ನನ್ನ ಆಧಾರ್ ಕಾರ್ಡಿನ ನೋಟರೈಸಡ್ ಪ್ರತಿಯನ್ನು ನಿ.ಪಿ.1 ಎಂದು, ನನ್ನ ಮತ್ತು ಎದುರುದಾರರ ಮದುವೆ ಫೋಟೋವನ್ನು ನಿ.ಪಿ.2 ಎಂದು, ಶ್ರೇಯಸ್ ಇವರ ಜನನ ಪ್ರಮಾಣ ಪತ್ರವನ್ನು ನಿ.ಪಿ.3 ಎಂದು, ಚಾರ್ವಿಕ್ ಇವರ ಜನನ ಪ್ರಮಾಣ ಪತ್ರವನ್ನು ನಿ.ಪಿ.4 ಎಂದು ಮತ್ತು ಮದುವೆ ಆಮಂತ್ರಣ ಪತ್ರಿಕೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು.

***ಆದ್ದರಿಂದ ನಾನು ಕೋರಿರುವಂತೆ ಈ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸುತ್ತೇನೆ.***

**ಪಾಟೀ ಸವಾಲುಃ ಶ್ರೀ ಸಿ.ಆರ್.ಎನ್., ಎದುರುದಾರರ ಪರ ವಕೀಲರಿಂದಃ**

ಸಮಯಾವಕಾಶವನ್ನು ಕೇಳಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.